# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 104/2022

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 24-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಮಹಾಂತೇಶ್ |
| ತಂದೆಯ ಹೆಸರು | : ಈರಪ್ಪ ಅಲಿಯಾಸ್ ಸಣ್ಣೀರಪ್ಪ |
| ವಯಸ್ಸು | : 34 ವರ್ಷ |
| ಉದ್ಯೋಗ | : ಚಾಲಕ |
| ವಾಸ ಸ್ಥಳ | : ಗುಡಿಹಳ್ಳಿ |

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ–**2** / ಈರಣ್ಣ ನನ್ನ ತಂದೆ. ಚಾಸಾ–**3** / ಹುಲುಗೇಶಿ ನಮ್ಮ ಜಮೀನಿಗೆ ಮಣ್ಣು ಹೊಡೆಯಲೆಂದು ಟ್ರಾಕ್ಟರ್ ತೆಗೆದುಕೊಂಡು ಬಂದಿದ್ದರು. ಚಾಸಾ–**4** / ರಂಗಸ್ವಾಮಿ ನಮ್ಮ ಪಕ್ಕದ ಜಮೀನಿನವರು. ಆರೋಪಿತರು ನಮ್ಮ ಊರಿನವರೆ. **2** ಮತ್ತು **3** ನೇ ಆರೋಪಿತರು **1** ನೇ ಆರೋಪಿತನ ಮಕ್ಕಳು. **4** ನೇ ಆರೋಪಿ **1** ನೇ ಆರೋಪಿತನ ಅಣ್ಣನ ಮಗ. ನಮಗೆ ಗುಡಿಹಳ್ಳಿ ಗ್ರಾಮದ ಹದ್ದಿಯಲ್ಲಿ ಸರ್ವೆ ನಂ.**39** ರಲ್ಲಿ ಸಾಗುವಳಿ ಜಮೀನು ಇದ್ದು ಅದರಲ್ಲಿ ನಾವು ಅಡಿಕೆ ಹಾಗೂ ಬಾಳೆ ಗಿಡಗಳನ್ನು ಹಾಕಿದ್ದೇವೆ. ದಿನಾಂಕ **23–08–2019** ರಂದು ಬೆಳಗ್ಗೆ **10.00** ಗಂಟೆಗೆ ನಾನು ಹಾಗೂ ಹುಲುಗೇಶಿ ಟ್ರಾಕ್ಟರ್ ತೆಗೆದುಕೊಂಡು ಮಣ್ಣು ಹೊಡೆಯಲೆಂದು ಹೋದೆವು. ಸದರಿ ಟ್ರಾಕ್ಟರ್ ಹುಲುಗೇಶಿಯದ್ದೇ ಇದ್ದು ಆತನೇ ಅದರ ಚಾಲಕ. ನಾವು ನಮ್ಮ ಸರ್ಕಾರಿ ಜಮೀನಿಗೆ ಮಣ್ಣು ಹೊಡೆದುಕೊಂಡೆವು. ಸುಮಾರು **10.30** ಗಂಟೆಗೆ ಆರೋಪಿತರು ಬಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದರು, ಅವರ ಪೈಕಿ **1** ನೇ ಆರೋಪಿ ಕಲ್ಲು ತೆಗೆದುಕೊಂಡು ನನ್ನ ಬಲಗಡೆಯ ಹಣೆಗೆ ಮತ್ತು ಮೂಗಿಗೆ ಹೊಡೆದ. ಹಳ್ಳದ ಮಣ್ಣು ನಾವು ಜಮೀನಿಗೆ ಹೊಡೆದುಕೊಂಡಿದ್ದ ವಿಚಾರವಾಗಿ ಅವರುಗಳು ನಮ್ಮೊಂದಿಗೆ ಗಲಾಟೆ ಮಾಡಿದರು. ರಮೇಶ ಹಾಗೂ ವೀರೇಶ್ ಇವರು ಚಪ್ಪಲಿ ಕಾಲಿನಿಂದ ನನಗೆ ಗುಂಡಿಗೆ ತಳ್ಳಿ ತುಳಿದರು. ಸದರಿಂದಾಗಿ ನನ್ನ ಹಣೆಯಿಂದ ಹಾಗೂ ಮೂಗಿನಿಂದ ರಕ್ತ ಬಂತು. ಅದನ್ನು ನೋಡಿ ನನ್ನ ತಂದೆ ಬಿಡಿಸಿಕೊಳ್ಳಲು ಬಂದಾಗ ಅವರಿಗೂ ಕೂಡಾ ಆರೋಪಿತರು ಕೈಕಾಲಿನಿಂದ ಅವರ ಬೆನ್ನಿಗೆ ಹೊಡೆದರು. ರಂಗಸ್ವಾಮಿ ಹಾಗೂ ಹುಲುಗೇಶಿ ನಮ್ಮನ್ನು ಬಿಡಿಸಿಕೊಂಡರು.

**2.** ತದ ನಂತರ ನಾನು ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಆಟೋದಲ್ಲಿ ಹೋದೆ. ತದ ನಂತರ ಮದ್ಯಾಹ್ನ **2.45** ಕ್ಕೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟೆ. ಆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ನನಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸಬಲ್ಲೆ. ನಾನು ದೂರು ಕೊಟ್ಟ ಬಳಿಕ ಪೊಲೀಸರು **3.45** ಗಂಟೆಗೆ ಗುಡಿಹಳ್ಳಿ ಹಳ್ಳದ

ಹತ್ತಿರ ಬಂದರು. ಅವರಿಗೆ ನಾನು ಸ್ಥಳವನ್ನು ತೋರಿಸಿದೆ. ಆಗ ಚಂದ್ರುಶೇಖರ್ ಮತ್ತು ರಂಗಸ್ವಾಮಿ ಇದ್ದರು. ಪೊಲೀಸರು ವಿಚಾರಿಸಿದಾಗ ನಾನು ಅವರಿಗೆ ನನಗೆ ಯಾವ ಕಲ್ಲಿನಿಂದ ಹೊಡೆಯಲಾಗಿದೆ ಎಂಬುದನ್ನು ತೋರಿಸಿದೆ. ಅವರು ಅದನ್ನು ತೆಗೆದುಕೊಂಡು ಇಟ್ಟುಕೊಂಡರು. ಪೊಲೀಸರು ಸ್ಥಳ ಮಹಜರ್ ಜರುಗಿಸಿದರು. ನಾನು ಅದಕ್ಕೆ ಸಹಿ ಮಾಡಿದ್ದೇನೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**2** ಎಂದು ನನ್ನ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು. ಆ ಕಲ್ಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಗುರುತಿಸಲಾಯಿತು. ದೂರು ಕೊಡುವ ಕಾಲಕ್ಕೆ ಗಾಬರಿಯಲ್ಲಿ **10.00** ಗಂಟೆಗೆ ಘಟನೆಯಾಗಿದೆ ಎಂದು ಹೇಳಿದ್ದೆ ಆ ನಂತರ ಪೊಲೀಸರಿಗೆ **10.30** ಕ್ಕೆ ಘಟನೆಯಾಗಿದೆ ಎಂದು ತಿಳಿಸಿದೆ.

**ಪಾಟೀ ಸವಾಲು: ಶ್ರೀ ಬಿ.ಟಿ.ವಿ.ಎಸ್. ಆರೋಪಿತರ ಪರ ವಕೀಲರಿಂದಃ**

**3.** ನಾನು **10** ನೇ ತರಗತಿ ಫೇಲಾಗಿದ್ದೇನೆ. ಆ ದಿನ ಅಂದರೆ **23–08–2019** ರಂದು ನಾನು ಮತ್ತು ಹುಲುಗೇಶಿ ಹಳ್ಳದ ಮಣ್ಣನ್ನು ನಮ್ಮ ಸಾಗುವಳಿ ಜಮೀನಿಗೆ ಹೊಡೆದಿದ್ದೆವು. ಬೆಳಗ್ಗೆ **8.00** ರಿಂದ ಮುಂಜಾನೆ **10.00** ಗಂಟೆಯವರೆಗೆ ಸುಮಾರು **10–12** ಲೋಡ್ ಟ್ರಾಕ್ಟರ್ ಮಣ್ಣನ್ನು ಹಳ್ಳದಿಂದ ನಮ್ಮ ಸಾಗುವಳಿ ಜಮೀನಿಗೆ ಹೊಡೆದಿದ್ದೆವು. ಒಂದು ಗಂಟೆಗೆ ನಾವು ಸುಮಾರು **5** ಲೋಡಿನಂತೆ ಮುಂಜಾನೆ **8.00** ರಿಂದ **9.00** ಗಂಟೆ ಅವಧಿಯಲ್ಲಿ **5** ಲೋಡ್ ಮಣ್ಣನ್ನು ಹೊಡೆದೆವು. ಅಲ್ಲಿ ಟ್ರಾಕ್ಟರ್ ಮಣ್ಣು ಹಸಿ ಇದ್ದ ಕಾರಣ ಸಿಕ್ಕಿಹಾಕಿಕೊಳ್ಳುತ್ತಿತ್ತು. ಮುಂದೆ **9.00–10.00** ಗಂಟೆ ಅವಧಿಯಲ್ಲಿ ಮತ್ತೆ **7** ಲೋಡ್ ಮಣ್ಣು ಹೊಡೆದೆವು. ಆ ರೀತಿ ಹಳ್ಳದ ಮಣ್ಣು ಹೊಡೆಯಲು ತಹಶೀಲ್ದಾರ್ ರವರಿಂದ ಅನುಮತಿ ಪಡೆದಿರಲಿಲ್ಲ.

**4.** ಆ ದಿನ ನಾವು ಆರೋಪಿತರ ಜಮೀನಿಗೆ ಮಣ್ಣು ಹೊಡೆಯಲು ಹೋದಾಗ ಅವರು ತಡೆದಿದ್ದು ಆಗ ನಾನು **2** ನೇ ಆರೋಪಿ ರಮೇಶ್ ಇವನ ತಲೆಗೆ ಹೊಡೆದು ಗಾಯಗೊಳಿಸಿದೆ ಎನ್ನುವುದು ಸರಿಯಲ್ಲ. ನಾನು ಆ ಹಳ್ಳದಿಂದ **4** ಕಿಮೀ ದೂರದಲ್ಲಿರುವ ಬಳಗಟ್ಟೆ ಊರಿನ ವಧುವನ್ನು ಮದುವೆಯಾಗಿದ್ದೇನೆ ಎನ್ನುವುದು ನಿಜ. ಆರೋಪಿತರು ನಮ್ಮ ವಿರುದ್ಧ ಕೇಸು ಮಾಡಿದ್ದಾರೆ ಎನ್ನುವುದು ನಿಜ. ಒಟ್ಟು **8** ಜನರ ವಿರುದ್ಧ ಕೇಸನ್ನು ಮಾಡಿದ್ದಾರೆ. ಆ ಪೈಕಿ ನಾನು ಮತ್ತು ನನ್ನ ತಂದೆಯನ್ನು ಹೊರತುಪಡಿಸಿ ಉಳಿದವರೆಲ್ಲಾ ಆ ಬಳಗಟ್ಟೆ ಊರಿನವರು ಎಂದರೆ ಕೇವಲ **3** ಜನ ಮಾತ್ರ ಬಳಗಟ್ಟೆಯವರು. ಆ ಪ್ರಕರಣದಲ್ಲಿ ನನ್ನ ತಂಗಿ, ಆಕೆಯ ಗಂಡ ಹಾಗೂ ಆಕೆಯ ಬಾವಮೈದುನ ಆರೋಪಿತರಾಗಿದ್ದಾರೆ ಎನ್ನುವುದು ನಿಜ. ನಾವು ರಮೇಶನಿಗೆ ಹೊಡೆದಿದ್ದರಿಂದ ಮತ್ತು ಅವರು ನಮ್ಮ ವಿರುದ್ಧ ದೂರು ಕೊಟ್ಟಿದ್ದರಿಂದ ನಮ್ಮ ಮೇಲೆ ಕೇಸು ಆಗುತ್ತದೆ ಎಂಬ ಭಯದಿಂದ ನಾವು ಅವರ ವಿರುದ್ಧ ಈ ಸುಳ್ಳು ಕೇಸನ್ನು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ಮೊದಲು ದೂರನ್ನು **10.00** ಗಂಟೆಗೆ ಘಟನೆ ನಡೆದಿದೆ ಎಂದು ಹೇಳಿ

ನಂತರ **10.30** ಗಂಟೆಗೆ ಘಟನೆ ನಡೆಯಿತು ಎಂದು ಪೊಲೀಸರ ಮುಂದೆ ಮತ್ತೊಮ್ಮೆ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**5.** ಚಾಸಾ–**4** / ರಂಗಸ್ವಾಮಿ ಬಳಗಟ್ಟೆಯವರು ಎನ್ನುವುದು ನಿಜ. ಚಾಸಾ–**5** / ಚಂದ್ರುಶೇಖರ್ ಕೂಡಾ ಬಳಗಟ್ಟೆಯವರು ಎನ್ನುವುದು ನಿಜ. ನಾನು ಮದ್ಯಾಹ್ನ **12.00** ಗಂಟೆಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಹೋದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಆಸ್ಪತ್ರೆಗೆ ಹೋದ ಆಟೋ ನಂಬರ್ ಗೊತ್ತಿಲ್ಲ. ನಾನು **3.00** ಗಂಟೆಗೆ ಐಮಂಗಲ ಪೊಲೀಸ್ ಠಾಣೆಗೆ ಹೋದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನು **2.45** ಗಂಟೆಗೆ ಹೋಗಿದ್ದೇನೆ. **3.00** ರಿಂದ **3.30** ರವರೆಗೆ ಪೊಲೀಸರು ಬಂದು ಸ್ಥಳ ಮಹಜರ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ **3.45** ಗಂಟೆಗೆ ಅವರು ಬಂದಿರುತ್ತಾರೆ. ಸದರಿ ಮಹಜರಿಗೆ ನನ್ನ ಸ್ನೇಹಿತರಾದ ರಂಗಸ್ವಾಮಿ ಚಂದ್ರುಶೇಖರ್ ಇವರಿಂದ ಪೊಲೀಸ್ ಠಾಣೆಯಲ್ಲೆ ಸಹಿ ಮಾಡಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಕಲ್ಲು ತೆಗೆದುಕೊಂಡು ನನ್ನ ಹಣೆಗೆ ಹೊಡೆಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುದ್ದೆ ಮಾಲು **1** ದಾರಿ ಪಕ್ಕ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಅದು ಹಳ್ಳದಲ್ಲಿ ಜೆಸಿಬಿ ತುಂಬುವಾಗ ಸಿಕ್ಕಿರುತ್ತದೆ. ಆ ದಿನ ರಮೇಶನಿಗೆ ಆದಂತಹ ಪೆಟ್ಟಿನಿಂದಾಗಿ ಆತ ಮರಣಹೊಂದಿದರೆ ನಮಗೆ ತೊಂದರೆಯಾಗುತ್ತದೆ ಎಂದು ನಾವು ಸುಳ್ಳು ದೂರನ್ನು ಕೊಟ್ಟು, ಪೊಲೀಸರಿಗೆ ಹೇಳಿ ಸುಳ್ಳು ದೋಷರೋಪಣ ಪತ್ರ ಮಾಡಿಸಿದ್ದೇವೆ ಎನ್ನುವುದು ಸರಿಯಲ್ಲ. ನಾನು ಈಗ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ರಂಗಸ್ವಾಮಿ / ಚಾಸಾ–4 ತಮ್ಮ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಗುಡಿಹಳ್ಳಿಯಲ್ಲಿಯೇ ವಾಸವಾಗಿದ್ದಾರೆ.

**ಮರು ಪಾಟೀ ಸವಾಲು: ಶ್ರೀ ಬಿ.ಟಿ.ವಿ.ಎಸ್. ಆರೋಪಿತರ ಪರ ವಕೀಲರಿಂದಃ**

ಸದರಿ ರಂಗಸ್ವಾಮಿಗೆ ಬಳಗಟ್ಟೆಯಲ್ಲಿ ಜಮೀನು ಹಾಗೂ ಮನೆ ಇವೆ ಎಂದರೆ ಮೊದಲು ಅವರಿಗೆ ಆ ಊರಲ್ಲಿ ಮನೆ ಇತ್ತು. ಈಗಲೂ ಕೂಡಾ ಆತ ಬಳಗಟ್ಟೆಯ ಮನೆಯಲ್ಲಿ ಹಾಗೂ ಗುಡಿಹಳ್ಳಿಯ ಜಮೀನಿನ ಮನೆಯಲ್ಲಿ ಎರಡೂ ಕಡೆಗೂ ವಾಸ ಮಾಡುತ್ತಾನೆ ಎನ್ನುವುದು ಸರಿಯಲ್ಲ. ಗುಡಿಹಳ್ಳಿ ಊರಲ್ಲಿ ಅವರಿಗೆ ಮನೆ ಇಲ್ಲ ಆದರೆ ಜಮೀನಿನಲ್ಲಿಯೇ ಅವರಿಗೆ ಮನೆ ಇದೆ ಎನ್ನುವುದು ನಿಜ. ನಾವು ಮತ್ತು ಅವರು ಬಹಳ ಸ್ನೇಹಿತರು ಎನ್ನುವುದು

ಸರಿಯಲ್ಲ. ಆತ ನನ್ನ ಹೆಂಡತಿಯ ಕಡೆಯಿಂದ ಸಂಬಂಧಿ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.